(ಇ) ಈ ಹಿಂದೆ ಒಳಚರಂಡಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದಾಗ ಕೆಂಪು ಕಲ್ಲಿನಿಂದ (ಲ್ಯಾಟ್ರೈಟ್ ಸ್ಟೋನ್ಸ್) ಮ್ಯಾನ್‌ಹೋಲ್‌ಗಳನ್ನು ರಚಿಸಲಾಗಿದ್ದು, ಪ್ರತಿ ವರ್ಷ ಮಳೆಗಾಲದಲ್ಲಿ ಕೆಲವು ಮ್ಯಾನ್‌ಹೋಲ್‌ಗಳು ಕುಸಿದು ಹಾಳಾಗುತ್ತಿದ್ದವು. ಈ ಮ್ಯಾನ್‌ಹೋಲ್‌ಗಳನ್ನು ಈಗ ಉತ್ತಮವಾದ ಸುಟ್ಟ ಇಟ್ಟಿಗೆಗಳನ್ನು ಬಳಸಿ ಪುರಸಭಾ ನಿಧಿಯಿಂದ ಖರ್ಚು ಹಾಕಿ ಮರುನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರೇಷ್ಮೆ ಉತ್ಪನ್ನ ಕಡಿಮೆಯಾಗಿರುವ ಬಗ್ಗೆ

1619 (2228) : ಶ್ರೀ ಹೆಚ್. ಗೋಪಾಲ್ ಭಂಡಾರಿ (ಕಾರ್ಕಳ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರೇಷ್ಮೆ ಉತ್ಪನ್ನ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರೇಷ್ಮೆ ಗೂಡನ್ನು ರೈತರು ಮಾರಾಟ ಮಾಡಲು ಮಾರುಕಟ್ಟೆ ವ್ಯವಸ್ಥೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಮಾಡದಿರುವುದರಿಂದ ಮೇಲಿನ ಸಮಸ್ಯೆ ಉದ್ಭವಿಸಿದೆಯೇ;

(ಇ) ಮಾರುಕಟ್ಟೆ ವ್ಯವಸ್ಥೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ; ಮತ್ತು ರಾಯಿ ಮತ್ತು ಕಾರ್ಕಳದ ನಕ್ರೆಯಲ್ಲಿರುವ ನೂಲು ಬಿಚ್ಚಾಣಿಕೆ ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ ಏಕೆ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಬಂದಿದೆ. ಕೃಷಿ ಕಾರ್ಮಿಕರ ಅಭಾವ ಮತ್ತು ದುಬಾರಿ ಕೂಲಿ ದರದಿಂದಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು ರೇಷ್ಮೆ ಕೃಷಿಯಲ್ಲಿ ಸ್ವತಃ ತೊಡಗಿದ್ದು, ರೇಷ್ಮೆ ಕೃಷಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಅಡಿಕೆಯಂತಹ ವಾಣಿಜ್ಯ ಬೆಳೆಯೂ ಸಹ ಪೈಪೋಟಿಯೊಡ್ಡಿದ್ದು ರೇಷ್ಮೆ ಕೃಷಿ ಹಿನ್ನಡೆಗೆ ಕಾರಣವಾಗಿದೆ.

(ಆ) ಇಲ್ಲ. ಬಿ. ಸಿ. ರೋಡ್‌ನಲ್ಲಿ ಮಾರುಕಟ್ಟೆ ಸ್ಥಾಪಿಸಲಾಗಿದ್ದರೂ ವರ್ಷವಿಡೀ ರೇಷ್ಮೆಗೂಡು ಬೆಳೆಯದೆ ಇರುವ ಕಾರಣ ಖಾಸಗಿ ನೂಲು ಬಿಚ್ಚಣಿಕೆದಾರರು ಘಟಕ ಸ್ಥಾಪಿಸಲು ಮುಂದೆ ಬರುತ್ತಿಲ್ಲ. ಈ ಕಾರಣದಿಂದ ಹೆಚ್ಚಿನ ಖರೀದಿದಾರರು ಸ್ಥಳೀಯವಾಗಿ ಇಲ್ಲದೆ ಇರುವ ಪ್ರಯುಕ್ತ ಮಾರುಕಟ್ಟೆ ವ್ಯವಸ್ಥೆ ತೃಪ್ತಿಕರವಾಗಿ ನಡೆಸಿಕೊಂಡು ಬರಲು ಸಾಧ್ಯವಾಗಿರುವುದಿಲ್ಲ.

(ಇ) ಖಾಸಗಿ ನೂಲು ಬಿಚ್ಚಾಣಿಕೆದಾರರು ಜಿಲ್ಲೆಯಲ್ಲಿ ಮುಂದೆ ಬರದೆ ಇರುವ ಕಾರಣ ಖರೀದಿಯಲ್ಲಿ ಪೈಪೋಟಿ ಇಲ್ಲದೆ ರೈತರಿಗೆ ಯೋಗ್ಯ ಬೆಲೆ ದೊರೆಯುವುದು ಕಠಿಣವಾಗುತ್ತಿದೆ. ಪಕ್ಕದ ಜಿಲ್ಲೆಗಳಿಂದ ಖರೀದಿದಾರರನ್ನು ಆಕರ್ಷಿಸಲು ಮುಂಬರುವ ದಿನಗಳಲ್ಲಿ ಪ್ರಯತ್ನಿಸಿ ಮಾರುಕಟ್ಟೆ ವ್ಯವಹಾರ ಸುಧಾರಿಸಲು ಪ್ರಯತ್ನಿಸಲಾಗುವುದು. ನೂಲು ಬಿಚ್ಚಾಣಿಕೆಯಲ್ಲಿ ನುರಿತ ಕೆಲಸಗಾರರು ಲಭ್ಯವಿಲ್ಲದ ಕಾರಣ ಮತ್ತು ದುಬಾರಿ ಕೂಲಿ ವೆಚ್ಚದಿಂದಾಗಿ ಅತಿ ಹೆಚ್ಚಿನ ಉತ್ಪಾದನಾ ವೆಚ್ಚ ತಗುಲುವುದರಿಂದ ನಕ್ರೆ ಮತ್ತು ರಾಯಿಯಲ್ಲಿರುವ ನೂಲು ಬಿಚ್ಚಾಣಿಕೆ ಘಟಕಗಳು ಸಾಕಷ್ಟು ನಷ್ಟ ಅನುಭವಿಸಿದ ಕಾರಣ ಸದ್ಯಕ್ಕೆ ಎರಡು ಘಟಕಗಳನ್ನು ಸ್ಥಗಿತಗೊಳಿಸಲಾಗಿದೆ.